ಮಳೆಯಿಂದ ಈ ಮುಂಚೆ ಪೆಡೆಸ್ಟ್ರಿಯನ್ ಕ್ರಾಸಿಂಗ್ಸ್‌ನಲ್ಲಿ ಹಚ್ಚಲಾಗಿದ್ದ ಜೀಬ್ರಾ ಕ್ರಾಸಿಂಗ್ಸ್ ಅಳಿಸಿಹೋಗಿರಲೂ ಬಹುದು ಮತ್ತು ಕಾಣಿಸದಂತೆಯೂ ಆಗಿರಬಹುದಾದ ಪುನ: ಬಣ್ಣ ಬಳಿಯುವ ಕೆಲಸ ಮಹಾನಗರಪಾಲಿಕೆಯಿಂದ ಮಂಜೂರಾತಿ ಅಥವಾ ಬಳಿಯುವ ಬಣ್ಣ ಒದಗಿಸಿದ ಕೂಡಲೇ ಮಾಡಲು ನಗರ ಸಂಚಾರಿ ಪೋಲೀಸರು ಸಿದ್ಧರಿದ್ದಾರೆ. ಈ ಬಗ್ಗೆ ಮಹಾನಗರಪಾಲಿಕೆಯನ್ನು ಶೀಘ್ರ ಮಂಜೂರಾತಿಗಾಗಿ ಜ್ಞಾಪಿಸುತ್ತಿರಲಾಗಿದೆ. ಈ ಕೆಲಸಕ್ಕಾಗಿ ನಗರ ಪೋಲೀಸ್ ಸಂಚಾರಿ ವಿಭಾಗಕ್ಕೆ ಪ್ರತ್ಯೇಕವಾದ ಹಣ ಗೊತ್ತುಪಡಿಸಿಲ್ಲ.

ಹೀಗಿದ್ದು, ರಸ್ತೆ ದಾಟುವ ಪಾದಚಾರಿಗಳು ಮತ್ತು ಶಾಲಾ ಮಕ್ಕಳು ಇವರ ಸುರಕ್ಷತೆಯ ದೃಷ್ಟಿಯಿಂದ ಹಾಲಿ ಇರುವ ಸಂಚಾರಿ ಪೋಲೀಸ್ ಸಿಬ್ಬಂದಿಯಲ್ಲಿ ಕೆಲವರನ್ನು, ಮಾನ್ಯ ಸದಸ್ಯರು ಸೂಚಿಸಿರುವಂತೆ ರಾಜಾಜಿನಗರ ಆರನೇ ಬ್ಲಾಕ್‌ನಲ್ಲೂ ಸಹ ಟ್ರಾಫಿಕ್ ಪೇದೆಯನ್ನು ನೇಮಿಸುವ ಏರ್ಪಾಡು ಮಾಡಲಾಗಿದೆ. ಮತ್ತು ೭ನೇ ಕ್ರಾಸ್ ಬಳಿ ಆಟೋರಿಕ್ಷಾಗಳು ಸುವ್ಯವಸ್ಥಿತವಾಗಿ ಪಾದಚಾರಿಗಳಿಗೆ ತೊಂದರೆಯಾಗದಂತೆ ಒಂದು ಗೊತ್ತಾದ ಸ್ಥಳದಲ್ಲಿ ಪಾರ್ಕ್ ಮಾಡುವ ವ್ಯವಸ್ಥೆಯನ್ನು ಮಾಡಲಾಗಿದೆ.

ಮಾನ್ಯ ಸದಸ್ಯರು ಮತ್ತು ರಾಜಾಜಿನಗರ ಆರನೇ ಬದಾಲಾವಣೆಯ ನಾಗರಿಕರು ದಿನಾಂಕ ೯-೮-೯೧ ರಂದು ನನಗೆ ಈ ಬಗ್ಗೆ ಮನವಿಯೊಂದನ್ನು ಕೊಟ್ಟಿದ್ದರು. ಈ ವಿಷಯವನ್ನು ನಾನು ನಗರ ಪೋಲೀಸ್ ಕಮಿಷನರ್ ಮತ್ತು ಸಂಚಾರಿ ವಿಭಾಗದ ಡಿ.ಸಿ.ಪಿ.ಯಾರೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಲು ಈಗಾಗಲೇ ಆದೇಶ ನೀಡಿದ್ದೇನೆ.

ಮಾನ್ಯ ಸದಸ್ಯರು ಮತ್ತು ರಾಜಾಜಿನಗರ ಆರನೇ ಬಡಾವಣೆಯ ನಾಗರಿಕರು ದಿನಾಂಕ 9-8-91ರಂದು ನನಗೆ ಈ ಬಗ್ಗೆ ಮನವಿಯೊಂದನ್ನು ಕೊಟ್ಟಿದ್ದರು. ಈ ವಿಷಯವನ್ನು ನಾನು ನಗರ ಪೋಲೀಸ್ ಕಮಿಷನರ್ ಮತ್ತು ಸಂಚಾರಿ ವಿಭಾಗದ ಡಿ.ಸಿ.ಪಿ. ಯವರೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಲು ಈಗಾಗಲೇ ಆದೇಶ ನೀಡಿದ್ದೇನೆ.

ಸಂಚಾರಿ ಪೋಲೀಸ್ ಹಾಗೂ ಜೀಬ್ರಾ ಕ್ರಾಸಿಂಗ್ ಹಾಕುವ ಬಗ್ಗೆ

ಮೇಲ್ಕಂಡ ವಿಷಯಕ್ಕೆ ಸಂಬಂಧ ಪಟ್ಟಂತೆ ರಾಜಾಜಿನಗರದ 6ನೇ ಬಡಾವಣೆಯ ನಾಗರೀಕರು ಕೇಳಿಕೊಳ್ಳುವುದೇನೆಂದರೆ, ರಾಜಾಜಿನಗರದ 6ನೇ ಬಡಾವಣೆಯು ಬಹಳಷ್ಟು ಶಾಲೆಗಳನ್ನು ಒಳಗೊಂಡಿರುತ್ತದೆ. ಅವುಗಳು ಯಾವುವೆಂದರೆ ಸೆಂಟ್‌ಜ್ಯಾನ್ಸ್, ಸೆಂಟ್ ಮಿನಾನ್, ಪೇರೆಂಟ್ಸ್ ಹೈಸ್ಕೂಲ್ ಮತ್ತು ಸರ್ಕಾರಿ ಪ್ರೌಢಶಾಲೆಗಳಾಗಿರುತ್ತದೆ. ಈ ಎಲ್ಲಾ ಶಾಲೆಗಳು ಬಹಳಷ್ಟು ಹತ್ತಿರದಲ್ಲಿ ಇರುವುದರಿಂದ, 80 ಅಡಿ ರಸ್ತೆಯಲ್ಲಿ ಬಹಳಷ್ಟು ವಾಹನಗಳು ಅಂದರೆ ಬಿ.ಟಿ.ಎಸ್ ಮತ್ತು ಖಾಸಗಿ ವಾಹನಗಳು ಓಡಾಡುವುದರಿಂದ, ಮಕ್ಕಳು ಮತ್ತು ಪಾದಾಚಾರಿಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ರಸ್ತೆಗಳನ್ನು ದಾಟಲು ಬಹಳಷ್ಟು ತೊಂದರೆಯಾಗಿರುತ್ತದೆ. ಇದು ಅಲ್ಲದೆ ಪಾಠಶಾಲೆಯ ಮಕ್ಕಳನ್ನು ದಾಟಿಸಬೇಕಾದರೆ ಒಂದು ಪ್ರಯಾಸದ ಕೆಲಸವೇ ಆಗುತ್ತದೆ. ಈ ಬಗ್ಗೆ ಅಲ್ಲಿಯ ಪೋಲೀಸ್ ಠಾಣೆಗೆ (ಮಾಗಡಿ ರಸ್ತೆ) ಮಕ್ಕಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ರಸ್ತೆ ದಾಟಿಸಲು ಹಾಗೂ ವಾಹನಗಳನ್ನು ನಿಯಂತ್ರಿಸಲು ಕೇಳಿಕೊಂಡಿದ್ದಾಗ್ಯೂ ಸಹ ಯಾವುದೇ ರೀತಿಯ ಕ್ರಮ ಕೈಗೊಂಡಿರುವುದಿಲ್ಲ. ಇದರ ಜೊತೆಗೆ 80 ಅಡಿ ರಸ್ತೆಯ ೭ನೇ ಕ್ರಾಸ್ ಮುಂದೆ ಬಸ್ ನಿಲ್ದಾಣ ಇದ್ದು, ಬಹಳಷ್ಟು ಆಟೋ ರಿಕ್ಷಾಗಳು ಸಹ ನಿಲ್ಲುತ್ತವೆ. ಇದರಿಂದ ಸಾಕಷ್ಟು ಅಪಘಾತಗಳಾಗಿ ಪ್ರಾಣಗಳನ್ನು ತೆಗೆದುಕೊಂಡಿರುವ ಸಂದರ್ಭಗಳುಂಟು.

ಮೇಲ್ಕಂಡ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಈ ಕೆಳಕಂಡ ಸೌಲಭ್ಯಗಳನ್ನು ನಮಗೆ ಕೂಡಲೇ ಮಾಡಿಕೊಡಬೇಕೆಂದು ಕೋರಿಕೊಳ್ಳುತ್ತೇವೆ.

1. 80 ಅಡಿ ರಸ್ತೆಯಲ್ಲಿರುವ ಕರ್ನಾಟಕ ಪ್ರಾವಿಷನ್ ಸ್ಟೋರ್ಸ್ ಮುಂದುಗಡೆ ಜೀಬ್ರಾ ಕ್ರಾಸಿಂಗ್ ಹಾಕಿಸುವುದು.

2. 80 ಅಡಿ ರಸ್ತೆಯಲ್ಲಿ ಬಹಳಷ್ಟು ವಾಹನಗಳು ಓಡಾಡುವುದರಿಂದ ಹಾಗೂ ಅಡ್ಡ ರಸ್ತೆಗಳು ಇರುವುದರಿಂದ ರೋಡ್ ಹಂಪ್‌ಗಳನ್ನು ಹಾಕಿಸುವುದು.

3. ಶಾಲೆಯ ವೇಳೆಯಲ್ಲಿ ಮಕ್ಕಳು ರಸ್ತೆಯನ್ನು ದಾಟಲು ಅನುಕೂಲವಾಗುವಂತೆ, ಹಾಗೂ ಇದೇ ವೇಳೆಯಲ್ಲಿಯೇ ಕಛೇರಿಯ ಬಸ್ಸುಗಳು ಓಡಾಡುವುದರಿಂದ ವಾಹನಗಳನ್ನು ನಿಯಂತ್ರಿಸಲು ಹಾಗೂ ಮಕ್ಕಳು ಸುಲಭವಾಗಿ ರಸ್ತೆಯನ್ನು ದಾಟಲು ಸಂಚಾರಿ ಪೋಲೀಸರನ್ನು ನೇಮಿಸುವುದು.

4. ಭಾಷ್ಯಮ್ ವೃತ್ತದಿಂದ ಪ್ರಸನ್ನಾದ ಕಡೆ ಬರುವಾಗ ಮತ್ತೊಂದು ವೃತ್ತವು ಇದ್ದು ಅದನ್ನು ದಾಟುವಾಗ ಅಪಘಾತವಾಗುವ ಸಂಭವವಿರುವುದರಿಂದ, ಕ್ಷೇಮದ ದೃಷ್ಟಿಯಿಂದ ಹಂಪ್‌ಗಳನ್ನು ಹಾಕಿಸುವುದು.

5. 75ನೇ ಕ್ರಾಸ್ ಮುಂದೆ ಇರುವ ಬಸ್ ನಿಲ್ದಾಣದ ಹತ್ತಿರ ಆಟೋರಿಕ್ಷಾಗಳು ನಿಲ್ಲದಂತೆ ತಡೆಯುವುದು.

6. 75ನೇ ಕ್ರಾಸ್‌ಗೆ (80 ಅಡಿ ರಸ್ತೆಯಲ್ಲಿರುವ) ಸಂಬಂಧಿಸಿದಂತೆ ಇರುವ ಹಾಲಿನ ಬೂತನ್ನು ಸ್ಥಳಾಂತರಿಸುವುದು.

ಈ ಮೇಲ್ಕಂಡ ಎಲ್ಲಾ ಸೌಲಭ್ಯಗಳು ನಾಗರೀಕರಿಗೆ ಅತ್ಯಂತ ಅವಶ್ಯಕವಾಗಿರುವುದರಿಂದ ಈ ಕೂಡಲೇ ಎಲ್ಲಾ ಸೌಲಭ್ಯಗಳನ್ನು ನಮಗೆ ಕಲ್ಪಿಸಿಕೊಡಬೇಕೆಂದು ಮತ್ತೊಮ್ಮೆ ಕೋರುತ್ತೇವೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿಗಳು.

(2) ಕನಕಪುರ ತಾಲ್ಲೂಕು ಸಾತನೂರು ಹೋಬಳಿ ಹರಿಹರ ಕೆರೆಯ ನಿರ್ಮಾಣ ಕಾರ್ಯ ಕುರಿತು.

ಶ್ರೀ ಸಿ.ಎಂ. ಲಿಂಗಪ್ಪ : ಮಾನ್ಯ ಅಧ್ಯಕ್ಷರೇ, ಕನಕಪುರ ತಾಲ್ಲೂಕು ಸಾತನೂರು ಹೋಬಳಿ ಹರಿಹರ ಕೆರೆ ನಿರ್ಮಾಣ ಕಾರ್ಯ ಪೂರ್ಣಗೊಂಡು ಸುಮಾರು ಹತ್ತು ವರ್ಷಗಳೇ ಕಳೆದಿದ್ದು ಈ ತನಕ ಒಮ್ಮೆಯೂ ಈ ಕೆರೆ ತುಂಬಿಲ್ಲ. ಕೆಳೆಗೆ ಹೆಚ್ಚುವರಿ ನೀರನ್ನು ಹರಿಸುವ ದೃಷ್ಟಿಯಿಂದ ಕಿತ್ತಳೆ ಹಳ್ಳಕ್ಕೆ ಅಡ್ಡಲಾಗಿ ಅಣೆಕಟ್ಟು ಕಟ್ಟಿಸಿ, ಅಲ್ಲಿಂದ ಫೀಡ್ ಚಾನಲ್ ಮೂಲಕ ಕೆರೆಗೆ ನೀರನ್ನು ಹರಿಸಲು ತಯಾರಿಸಲಾಗಿದ್ದ ಯೋಜನೆಯ ಅನುಷ್ಠಾನ ಯಾವಾಗ ಮಾಡಲಾಗುತ್ತದೆ ಎಂಬುದರ ಬಗ್ಗೆ ಸರ್ಕಾರದ ವತಿಯಿಂದ ತಿಳಿಯಬಯಸುತ್ತಾ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಮಾನ್ಯ ಸಿ.ಎಂ. ಲಿಂಗಪ್ಪನವರ ಪ್ರಶ್ನೆಗೆ ಬೆಂಗಳೂರು ಜಿಲ್ಲಾಪರಿಷತ್ತಿನಿಂದ ಸರಿಯಾದ ಮಾಹಿತಿ ದೊರಕಿಲ್ಲ. ಆಫೀಸರ್‌ಗಳೂ ಈಗಾಗಲೇ ಕಾಂಟಾಕ್ಟ್ ಮಾಡಿದ್ದಾರೆ. ಮಾಹಿತಿ ಬಂದ ಕೂಡಲೇ ಉತ್ತರ ಓದಗಿಸಿಕೊಡುತ್ತೇವೆ.

(ಮಾನ್ಯ ಸದಸ್ಯರಾದ ಡಾ, ಆರ್.ಬಿ. ಚೌದರಿಯವರು ಸದನದಲ್ಲಿ ಗೈರು ಹಾಜರಾಗಿದರು)